ಕರ್ನಾಟಕಸರ್ಕಾರ
ಪಂಚಾಯತ್ ರಾಜ್ ಆಯುಕ್ತಾಲಯ
ಕಾಳಿದಾಸ ರಸ್ತೆ, ಗಾಂಧಿನಗರ ಬೆಂಗಳೂರು – 560 09.

ಸಂಖ್ಯೆ: ಕಪಂರಾಆ/ಅಭಿವೃದ್ಧಿ/271/2021 ದಿನಾಂಕ:15.07.2021.

**ಇವರಿಗೆ,**
ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ
ವಿಶ್ವೇಶ್ವರಯ್ಯ ಕೇಂದ್ರ, ಚಿಕ್ಕಗೋಪುರ
3ನೇ ಮಹಡಿ, ಡಾ|| ಅಂಬೇಡ್ಕರ್ ವೀಧಿ,
ಬೆಂಗಳೂರು-01

**ಮಾನ್ಯರೆ,**

**ವಿಷಯ** : ರಾಜ್ಯದಲ್ಲಿ ಕೋವಿಡ್-19ರ ಸೋಂಕಿತ ಹಾಗೂ ಬಾಧಿತ ಮಕ್ಕಳ ಆರೈಕೆ ಮತ್ತು ರಕ್ಷಣೆಗಾಗಿ " ಮಕ್ಕಳ ಪರಿವೀಕ್ಷಣೆ ಮತ್ತು ಮಾಹಿತಿ ನಿರ್ವಹಣೆ ವ್ಯವಸ್ಥೆ" ಕುರಿತು

**ಉಲ್ಲೇಖ** :
1. ಸರ್ಕಾರದ ಆದೇಶ ಸಂಖ್ಯೆ: ಕಂಇ158 ಟಿಎನ್ ಆರ್ 2020(2) ದಿನಾಂಕ: 03-05-2021
2. ಸರ್ಕಾರದ ಸುತ್ತೋಲೆ ಸಂಖ್ಯೆ:ಕಪಂರಾಆ/ಅಭಿವೃದ್ಧಿ/202/2021 ದಿನಾಂಕ: 15-05-2021
3. ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಸುತ್ತೋಲೆ ಸಂಖ್ಯೆ: ಕಪಂರಾಆ/ಅಭಿವೃದ್ಧಿ/271/2021 ದಿನಾಂಕ: 21-06-2021

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ಆದೇಶದ ಮೂಲಕ ಕೋವಿಡ್-19 ಸೋಂಕಿನಿಂದ ಪೋಷಕರನ್ನು ಕಳೆದುಕೊಂಡ ಅನಾಥರಾದ ಮಕ್ಕಳಿಗೆ ಅತ್ಯಾವಶ್ಯಕ ಸೌಕರ್ಯಗಳನ್ನು ಆದ್ಯತೆಯ ಆಧಾರದ ಮೇಲೆ ಒದಗಿಸುವ ಸಲುವಾಗಿ ಮಕ್ಕಳ ರಕ್ಷಣಾ ಕಾರ್ಯಪಡೆಯನ್ನು ಸಹ ರಚಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಉಲ್ಲೇಖಿತ ಸರ್ಕಾರದ ಸುತ್ತೋಲೆ(2) ಮೂಲಕ ಅನಾಥ ಮಕ್ಕಳ ರಕ್ಷಣೆಗೆ ಗ್ರಾಮ ಪಂಚಾಯಿತಿ ಕಾರ್ಯಪಡೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ನಿರ್ದೇಶನಗಳನ್ನು ನೀಡಲಾಗಿದೆ.

ಉಲ್ಲೇಖಿತ ಸುತ್ತೋಲೆ (3)ರ ಮೂಲಕ ಕೋವಿಡ್ ಸೋಂಕಿತ/ಕೋವಿಡ್ ಬಾಧಿತ, ಮಗು/ಮಕ್ಕಳ ಸ್ಥಿತಿಗತಿಗಳನ್ನು ಪ್ರಾರಂಭಿಕ ಹಂತದಿಂದ ಮಕ್ಕಳು/ಪೋಷಕರು ಸೋಂಕಿನಿಂದ ಗುಣಮುಖವಾಗುವವರೆಗೆ ಅಗತ್ಯ ಇರುವಲ್ಲಿ 18 ವರ್ಷ ಪೂರ್ಣಗೊಳ್ಳುವವರೆಗೆ ವೈದ್ಯಕೀಯ/ವೈದ್ಯಕೀಯೇತರ/ಮಕ್ಕಳ ರಕ್ಷಣಾ ಘಟಕದ ಆರೈಕೆಗೆ ಸೂಕ್ತ ವ್ಯವಸ್ಥೆಯನ್ನು ಮಾಡಲು ಪ್ರಕ್ರಿಯೆಯನ್ನು ನಿರಂತರವಾಗಿ ಗಮನಿಸಲು ಸಂಬಂಧಿಸಿದಂತೆ **"ಮಕ್ಕಳ ಪರಿವೀಕ್ಷಣೆ ಮತ್ತು ಮಾಹಿತಿ ನಿರ್ವಹಣೆ ವ್ಯವಸ್ಥೆ" (Child MIS)** ಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಪಂಚತಂತ್ರ ತಂತ್ರಾಂಶದಲ್ಲಿ ರೂಪಿಸಲಾಗಿದೆ, ಹಾಗೂ ಕೋವಿಡ್ ಸೋಂಕಿತ/ಕೋವಿಡ್ ಭಾದಿತ ಮಗು/ಮಕ್ಕಳ ಮಾಹಿತಿಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲು ಗ್ರಾಮ ಪಂಚಾಯಿತಿ ಕಾರ್ಯಪಡೆಗೆ ನಿರ್ದೇಶಿಸಲಾಗಿದೆ.

ಕೋವಿಡ್ ಸೋಂಕಿತ/ಕೋವಿಡ್ ಬಾಧಿತ, ಮಗು/ಮಕ್ಕಳ ವಿವರಗಳು ಕಾಲಕಾಲಕ್ಕೆ ಪಂಚತಂತ್ರ ತಂತ್ರಾಂಶದ https://panchatantra.kar.nic.in/ ಲಿಂಕ್ ನಲ್ಲಿ **ವರದಿಗಳು** --> **ಕೋವಿಡ್-19 ಸಂಬಂಧಿತ ವರದಿಗಳು** ಲಭ್ಯವಿದ್ದು, ಈ ಮಾಹಿತಿಗಳನ್ನು ವೀಕ್ಷಿಸಲು ಹಾಗೂ

ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಲಾಗಿನ್‌ಗಳನ್ನು ಸೃಜಿಸಲಾಗಿದೆ. (ಲಾಗಿನ್‌ಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ)

ಪ್ರಸ್ತುತ ಪರಿಸ್ಥಿತಿಯಲ್ಲಿ ಕೋವಿಡ್ ಸೋಂಕಿತ ಮತ್ತು ಬಾಧಿತ ಮಕ್ಕಳ ಸ್ಥಿತಿಗತಿ ತಿಳಿಯಲು ಮತ್ತು ಅಂತಹ ಮಕ್ಕಳ ಸೂಕ್ತ ಆರೈಕೆ ಮತ್ತು ರಕ್ಷಣೆಗಾಗಿ **Child MIS** ನ್ನು ವ್ಯವಸ್ಥಿತವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸುವುದು ಅತ್ಯಗತ್ಯ ಮತ್ತು ಅಷ್ಟೇ ಪ್ರಾಮುಖ್ಯವಾಗಿದೆ. ಆದ ಕಾರಣ ತಾವುಗಳು ತಮ್ಮ ಅಧೀನದಲ್ಲಿರುವ ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಗಳಿಗೆ **Child MIS** ಸ್ಪಷ್ಟ ಮಾಹಿತಿಯನ್ನು ವೀಕ್ಷಿಸಲು ಹಾಗೂ ಸೂಕ್ತ ಕ್ರಮಗಳನ್ನು ಅನುಸರಿಸಲು ನಿರ್ದೇಶನ ನೀಡಲು ಕೋರಿದೆ.

ತಮ್ಮ ವಿಶ್ವಾಸಿ,

ಆಯುಕ್ತರು,
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,
ಬೆಂಗಳೂರು.

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, 4ನೇ ಮಹಡಿ, ಕೃಷಿಭವನ, ನೃಪತುಂಗ ರಸ್ತೆ, ರಾಣಿಚೆನ್ನಮ್ಮ ವೃತ್ತ, ಬೆಂಗಳೂರು.
4. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ. (ನಿರ್ದೇಶಕರು, ಸಮಗ್ರ ಮಕ್ಕಳ ರಕ್ಷಣಾ ನಿರ್ದೇಶನಾಲಯ ಇವರ ಮೂಲಕ)
5. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.
6. ಎಲ್ಲಾ ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು. (ನಿರ್ದೇಶಕರು, ಸಮಗ್ರ ಮಕ್ಕಳ ರಕ್ಷಣಾ ನಿರ್ದೇಶನಾಲಯ ಇವರ ಮೂಲಕ)
7. ಹೆಚ್ಚುವರಿ ಪ್ರತಿ ಶಾಖಾ ರಕ್ಷಕ ಕಡತ.

| Sl No | DistName | user id | password |
|---|---|---|---|
| 1 | BAGALKOTE | BAGAdcpu | abc123@@ |
| 2 | BENGALURU | BENGdcpu | " |
| 3 | BENGALURU RURAL | BENRdcpu | " |
| 4 | BELAGAVI | BELAdcpu | " |
| 5 | BALLARI | BALLdcpu | " |
| 6 | BIDAR | BIDAdcpu | " |
| 7 | VIJAYAPURA | VIJAdcpu | " |
| 8 | CHAMARAJANAGARA | CHAMdcpu | " |
| 9 | CHIKKAMAGALURU | CHIKdcpu | " |
| 10 | CHITRADURGA | CHITdcpu | " |
| 11 | DAKSHINA KANNADA | DAKSdcpu | " |
| 12 | DAVANAGERE | DAVAdcpu | " |
| 13 | DHARWAR | DHARdcpu | " |
| 14 | GADAG | GADAdcpu | " |
| 15 | KALABURAGI | KALAdcpu | " |
| 16 | HASSAN | HASSdcpu | " |
| 17 | HAVERI | HAVEdcpu | " |
| 18 | KODAGU | KODAdcpu | " |
| 19 | KOLAR | KOLAdcpu | " |
| 20 | KOPPAL | KOPPdcpu | " |
| 21 | MANDYA | MANDdcpu | " |
| 22 | MYSURU | MYSUdcpu | " |
| 23 | RAICHUR | RAICdcpu | " |
| 24 | SHIVAMOGGA | SHIVdcpu | " |
| 25 | TUMAKURU | TUMAdcpu | " |
| 26 | UDUPI | UDUPdcpu | " |
| 27 | UTTARA KANNADA | UTTAdcpu | " |
| 28 | CHIKKABALLAPURA | CHKBdcpu | " |
| 29 | RAMANAGARA | RAMAdcpu | " |
| 30 | YADGIR | YADGdcpu | " |